# ಗಾಂಧಿ: ದೂರ–ದೂರು

‘ಪ್ರೀತಿಯಿಲ್ಲದೆ ನಾನು ಏನನ್ನೂ ಮಾಡಲಾರೆ; ದ್ವೇಷವನ್ನು ಕೂಡ’ ಎನ್ನುವುದು ಕವಿ ಚಂದ್ರಶೇಖರ ಪಾಟೀಲ (ಚಂಪಾ) ಅವರ ಮಾತು. ಗಾಂಧೀಜಿಯ ಬಗ್ಗೆ ನಿರಾಕರಣೆ ಅಥವಾ ದ್ವೇಷದ ಮಾತುಗಳನ್ನು ಆಡುವವರಿಗೆ ಕೂಡ ಈ ಮಾತನ್ನು ಅನ್ವಯಿಸಬಹುದೆ? ಗಾಂಧಿಯ ಬಗೆಗಿನ ನಕಾರಾತ್ಮಕ ಮಾತುಗಳ ಆಳದಲ್ಲಿರುವುದು ಪ್ರೀತಿಯೇ ಇರಬಹುದೇ?

ನಾಸ್ತಿಕರ ವಿಚಾರಗಳನ್ನು ಗಮನಿಸಿ. ದೇವರಿಲ್ಲವೆಂದು ಖಂಡತುಂಡವಾಗಿ ಹೇಳುತ್ತ, ದೇವರ ಅಸ್ತಿತ್ವವನ್ನು ನಿರಾಕರಿಸುತ್ತ, ಮನುಷ್ಯ ಶಕ್ತಿಯೇ ಆತ್ಯಂತಿಕವಾದುದೆಂದು ನಾಸ್ತಿಕರು ಪ್ರತಿಪಾದಿಸುತ್ತಾರೆ. ‘ದೇವರ ನಿರಾಕರಣೆ’ಯ ಈ ವಾದಗಳು, ದೇವರ ಅಸ್ತಿತ್ವಕ್ಕೆ ಮತ್ತಷ್ಟು ಅಡಿಗೆರೆ ಎಳೆಯುವಂತಿರುತ್ತವೆ. ‘ಇಲ್ಲ’ ಎನ್ನುವುದರ ತಳಹದಿ ‘ಇದೆ’ ಎನ್ನುವಂತಿರುತ್ತದೆ. ಇದೇ ರೀತಿ, ಗಾಂಧಿಯನ್ನು ನಮ್ಮ ಭಾವಕೋಶದ ಭಾಗವಾಗಿಸಿಕೊಂಡೇ ಆತನನ್ನು ನಿರಾಕರಿಸುತ್ತಿರುತ್ತೇವೆ ಎನ್ನುವಂತೆ ನಮ್ಮಲ್ಲಿನ ಬಹುತೇಕರ ವರ್ತನೆಗಳಿರುತ್ತವೆ. ದೇವರು ನಮ್ಮ ಅನುಭವದ ಅಳತೆಯನ್ನು ಮೀರಲಾರ ಎನ್ನುತ್ತಾರೆ ಶಿವರಾಮ ಕಾರಂತರು. ಗಾಂಧಿಯೂ ಅಷ್ಟೇ, ನಮ್ಮ ಅನುಭವದ ಅಳತೆಯನ್ನು ಮೀರಲಾರರು.

ಗಾಂಧಿಯ ಬಗೆಗಿನ ನಮ್ಮ ದೂರು ಅಥವಾ ಆಕ್ಷೇಪಗಳು ತಂದೆಯೊಬ್ಬನ ಕುರಿತ ಮಕ್ಕಳ ಆಕ್ಷೇಪದಂತೆ ಕಾಣಿಸುತ್ತವೆ. ಪರೀಕ್ಷಿಸಿ ನೋಡಿ: ತಂದೆಯ ಬಗ್ಗೆ ದೂರುಗಳಿಲ್ಲದ ವ್ಯಕ್ತಿ ಬಹುಶಃ ಈ ಪ್ರಪಂಚದಲ್ಲಿ ಒಬ್ಬರೂ ಇರಲಾರರು. ಅದರಲ್ಲೂ ಗಂಡು ಮಕ್ಕಳಿಗಂತೂ ತಂದೆ ಪ್ರತಿಪಕ್ಷವಿದ್ದಂತೆ. ಅಪ್ಪನನ್ನು ಮೀರುವುದೇ ಬಹುತೇಕ ಸಂದರ್ಭಗಳಲ್ಲಿ ಹರಯದ ಯುವಕರ ಜೀವನದ ಗುರಿ ಇದ್ದಂತಿರುತ್ತದೆ. ಅಮ್ಮನನ್ನು ಅತಿಯಾಗಿ ಪ್ರೀತಿಸುತ್ತ, ಇನ್ನೊಂದು ತುದಿಯಲ್ಲಿ ಅಪ್ಪನ ಬಗ್ಗೆ ಒರಟುತನ ರೂಢಿಸಿಕೊಂಡಿರುತ್ತೇವೆ. ಬಹುಶಃ, ಅಪ್ಪನ ಸಂಕೀರ್ಣ ವ್ಯಕ್ತಿತ್ವ ಅರ್ಥವಾಗುವುದು ಅವನನ್ನು ಕಳೆದುಕೊಂಡಾಗ ಇಲ್ಲವೇ ನಾವೇ ಅಪ್ಪನ ಸ್ಥಾನಕ್ಕೆ ಸಂದು ನಮ್ಮ ಮಕ್ಕಳು ನಮ್ಮ ಮೇಲೆ ತಿರುಗಿಬಿದ್ದಾಗ. ಕುಮಾರವ್ಯಾಸ ಹೇಳುವುದೂ ಇದನ್ನೇ: ‘ಲೋಕದಲ್ಲಿರುವುದು ಎರಡೇ ಪಕ್ಷ. ಒಂದು ಮಾತೃಪಕ್ಷ, ಇನ್ನೊಂದು ಪಿತೃಪಕ್ಷ.’ ಮಾತೃಪಕ್ಷ ಎನ್ನುವುದು ಮಕ್ಕಳ ಕಣ್ಣಿಗೆ ಆಡಳಿತ ಪಕ್ಷವಾದರೆ, ಪಿತೃಪಕ್ಷ ಪ್ರತಿಪಕ್ಷವಾಗಿ ಕಾಣುವುದೆಂದು ಬಿಡಿಸಿ ಹೇಳಬೇಕಿಲ್ಲವಷ್ಟೆ?

ಪುರಾಣ, ಇತಿಹಾಸಗಳಲ್ಲಿ ಮರುಕಳಿಸುವ ಸಂಗತಿಗಳಲ್ಲಿ ‘ಪಿತೃಹತ್ಯೆ’ಯೂ ಒಂದು. ತಂದೆಯ ಸಮಾಧಿಯ ಮೇಲೆ ಮಗನ ಸಿಂಹಾಸನ! ಅಧಿಕಾರಕ್ಕಾಗಿ ತಂದೆಯನ್ನು ಸೆರೆಮನೆಗೆ ದೂಡುವ, ಕಾಡುಪಾಲು ಮಾಡುವ, ಇಲ್ಲವೇ ಕೊಲ್ಲುವ ಕಥನಗಳು ಸಾಕಷ್ಟಿವೆ. ಅಪ್ಪನ ವಿಚಾರಗಳನ್ನು ಹೇರಿಕೆಯೆಂದು ಭಾವಿಸಿ, ಅವುಗಳಿಂದ ಬಿಡುಗಡೆಗೆ ಹಂಬಲಿಸುವುದೂ ಒಂದು ಬಗೆಯ ಪಿತೃಹತ್ಯೆಯೇ. ಹಾಗಾಗಿ, ಪಿತೃಹತ್ಯೆ ಎನ್ನುವುದು ಕೆಲವು ಸಂದರ್ಭಗಳಲ್ಲಿ ಬಿಡುಗಡೆಯೂ ಹೌದು.

ಗಾಂಧೀಜಿಯ ನಿರಾಕರಣೆಯಲ್ಲೂ ಪಿತೃಹತ್ಯೆಯ ನೆರಳೇ ಕಾಣಿಸುತ್ತದೆ. ಈ ಹತ್ಯೆ ದೈಹಿಕವಾದುದೂ ಹೌದು, ಮಾನಸಿಕವೂ (ವೈಚಾರಿಕವೂ) ಹೌದು. ಬಾಪೂ ಮೇಲಿರುವ ಬಹು ದೊಡ್ಡ ಆಪಾದನೆ, ಆತ ಮುಸ್ಲಿಮರ ಪಕ್ಷಪಾತಿಯಾಗಿದ್ದ ಹಾಗೂ ದೇಶದ ವಿಭಜನೆಗೆ ಕಾರಣನಾಗಿದ್ದ ಎನ್ನುವುದು. ಈ ಕಾರಣದಿಂದಲೇ ಗಾಂಧಿಯನ್ನು ದೈಹಿಕವಾಗಿ ಕೊಲ್ಲಲಾಯಿತು. ಗಾಳಿ ಜೋರಾಗಿ ಬೀಸಿದರೆ ಹಾರಿಹೋಗುವಂತಿದ್ದ ಕೃಶಕಾಯನ ದೇಹದೊಳಗೆ ಗುಂಡುಗಳನ್ನು ಹೊಡೆಯಲಾಯಿತು. ಆ ಮೂಲಕ, ಪಿತೃಹತ್ಯೆಯ ಮೂಲಕವೇ ಸ್ವತಂತ್ರ ಭಾರತದ ಚರಿತ್ರೆ ಆರಂಭಗೊಂಡಂತಾಯಿತು.

ಮುಸ್ಲಿಮರ ಬಗೆಗಿನ ಗಾಂಧೀಜಿಯ ಪ್ರೀತಿ ಗುಟ್ಟಿನದೇನಲ್ಲ. ಆ ಕಾಳಜಿಯನ್ನು ತಂದೆ–ತಾಯಿಯರ ನೆಲೆಗಟ್ಟಿನಲ್ಲಿ ನೋಡಲಿಕ್ಕೆ ಸಾಧ್ಯವಿದೆ. ಹೆತ್ತವರು ಮಕ್ಕಳೆಲ್ಲರನ್ನೂ ಸಮಾನಪ್ರೀತಿಯಿಂದ ನೋಡುತ್ತಾರಾದರೂ, ಯಾವುದೋ ಕಾರಣದಿಂದಾಗಿ ಕೊಂಚ ಅಶಕ್ತರಾದ ಮಕ್ಕಳ ಬಗ್ಗೆ ಹೆಚ್ಚು ಕಾಳಜಿ ವಹಿಸುವುದು ಅಸಹಜವೇನಲ್ಲ. ಮುಸ್ಲಿಮರ ಬಗೆಗಿನ ಗಾಂಧೀಜಿಯ ಕಾಳಜಿಯೂ ಓರ್ವ ತಂದೆಯ ಮಮತೆಯಂತಹುದೇ. ಇದೇ ತಂದೆ, ಮಕ್ಕಳು ತಪ್ಪು ಮಾಡಿದಾಗ ಗದರುವುದಕ್ಕೂ ಹಿಂಜರಿಯಲಿಲ್ಲ ಎನ್ನುವುದನ್ನು ನಾವು ಮರೆಯಬಾರದು. ಬೆಳೆದು ನಿಂತ ಮಕ್ಕಳು ಸ್ವತಂತ್ರರಾಗಿ ಬದುಕಲು ನಿಶ್ಚಯಿಸಿ ಪ್ರತ್ಯೇಕ ಒಲೆ ಹೂಡಿದಂತೆ, ಭಾರತ–ಪಾಕಿಸ್ತಾನ ವಿಭಜನೆಗೊಂಡವು. ದೇಶ ವಿಭಜನೆಯ ವಿದ್ಯಮಾನದಲ್ಲಿ ಗಾಂಧೀಜಿಯದು ಓರ್ವ ಅಸಹಾಯಕ ತಂದೆಯ ಪಾತ್ರವಷ್ಟೇ. ಇದನ್ನು ಮರೆತು, ದೇಶದ ವಿಭಜನೆಗೆ ಗಾಂಧೀಜಿಯನ್ನು ಹೊಣೆಯಾಗಿಸುವುದು, ತಂದೆಯ ಹೊಣೆಗಾರಿಕೆಯನ್ನು ಅರ್ಥ ಮಾಡಿಕೊಳ್ಳಲಾಗದ ಮಕ್ಕಳ ಸೋಲಿನಂತೆ ಕಾಣಿಸುತ್ತದೆ. ಅವಿಭಕ್ತ ಕುಟುಂಬವೊಂದು ಚೂರು ಚೂರುಗಳಾಗಿ ಒಡೆಯುವುದನ್ನು ಸಹಜವಾಗಿ ಒಪ್ಪಿಕೊಳ್ಳುವ ನಾವು, ಅಂತಹುದೇ ಚೂರೊಂದಾಗಿ ಬದುಕುತ್ತಿದ್ದೇವೆ ಎನ್ನುವುದನ್ನು ಮರೆಯಬಾರದು.

ಗಾಂಧಿವಿರೋಧ ಈ ಕಾಲಕ್ಕೆ ಸೀಮಿತವಾದ ವೈರುಧ್ಯವೇನಲ್ಲ. ಗಾಂಧೀಜಿ ಬದುಕಿದ್ದಾಗಲೂ ಅವರ ವಿಚಾರಗಳನ್ನು ವಿರೋಧಿಸುವವರಿದ್ದರು. ಆದರೆ, ದೇಶದ ಬಹುಸಂಖ್ಯಾತರು ಗಾಂಧೀಜಿ ಅವರ ಬಗ್ಗೆ ಪ್ರೀತಿ, ಗೌರವವುಳ್ಳವರಾಗಿದ್ದರು. ದೇಶದಲ್ಲಿನ ಕೋಮುದಳ್ಳುರಿಯ ಬಗ್ಗೆ ಹೇಸಿ, ಗಾಂಧೀಜಿ ಉಪವಾಸ ಮಾಡತೊಡಗಿದಾಗ, ಹಿಂದೂ ಮುಸ್ಲಿಂ ಎರಡೂ ಸಮುದಾಯದವರು ಶಸ್ತ್ರಗಳನ್ನು ಕೆಳಗಿಳಿಸಿ ಸೌಹಾರ್ದದಿಂದ ನಡೆದುಕೊಳ್ಳುತ್ತೇವೆಂದು ಮಹಾತ್ಮನಿಗೆ ಮಾತು ಕೊಟ್ಟರು.

ದೇಶಕ್ಕಾಗಿ ವೈಯಕ್ತಿಕ ಬದುಕಿನ ಸುಖವನ್ನು ತ್ಯಾಗ ಮಾಡಿದ ಗಾಂಧೀಜಿಗೆ ತನ್ನ ಆಶ್ರಮ ಹಾಗೂ ಜೈಲಿನ ನಡುವೆ ಹೆಚ್ಚು ವ್ಯತ್ಯಾಸವಿರಲಿಲ್ಲ. ಜೈಲಿನಲ್ಲಿದ್ದಾಗಲೇ ಪತ್ನಿ ಕಸ್ತೂರ ಬಾ ಅವರನ್ನು ಕಳೆದುಕೊಂಡರು; ಮಗನಂತಿದ್ದ ಮಹದೇವ ದೇಸಾಯಿ ಅವರನ್ನು ಕಳೆದುಕೊಂಡರು. ಜೀವನದುದ್ದಕ್ಕೂ ಒಂಟಿಯಾಗುತ್ತಲೇ ಹೋದ ಮಹಾತ್ಮ, ಇಡೀ ದೇಶವನ್ನು ಕುಟುಂಬ ಎಂದು ಭಾವಿಸಿದರು. ತಮ್ಮ ಕುಟುಂಬದವರಿಂದಲೇ ಪೆಟ್ಟು ತಿಂದರು.

ಗಾಂಧಿಯ ಮೇಲಿನ ಅಸಹನೆಗೆ ಕಾರಣವಾದರೂ ಏನು? ಗಾಂಧಿ ಹೇಳುವ ಸತ್ಯ, ಅಹಿಂಸೆ, ಸ್ವರಾಜ್ಯದ ಪರಿಕಲ್ಪನೆಗಳು ನಮಗೆ ನುಂಗಲಾರದ ತುತ್ತಾಗಿ ಪರಿಣಮಿಸಿ, ಗಾಂಧಿ ಎನ್ನುವ ವ್ಯಕ್ತಿ ನಮ್ಮ ಆತ್ಮಸಾಕ್ಷಿಗೆ ಸವಾಲಾಗಿ ಪರಿಣಮಿಸಿ, ಆ ಆತ್ಮಸಾಕ್ಷಿಯಿಂದ ದೂರ ಓಡುವ ಪ್ರಯತ್ನದಲ್ಲಿ ಮಹಾತ್ಮನನ್ನು ನಾವು ನಿರಾಕರಿಸುತ್ತಿರಬಹುದೆ? ಈಗಲೂ ಗಾಂಧಿಗೆ ಗುಂಡು ಹೊಡೆಯುತ್ತಿರುತ್ತೇವೆ; ಆ ಮೂಲಕ ನಮ್ಮ ಆತ್ಮಸಾಕ್ಷಿಯನ್ನು ಕೊಂದುಕೊಳ್ಳುತ್ತಿದ್ದೇವೆ.

■ **ಚಂಪಕಮಾಲಾ**

## ಮಾತೇ ಮುತ್ತು

- ಕಾರ್ಯದ ವಿಶೇಷತೆಗೆ ಸರಿಯಾಗುವಂತೆ ಕಾರಣವೂ ವಿಶೇಷವಾಗಿರಬೇಕು.
  —ಕುವೆಂಪು
- ಶ್ರದ್ಧೆಯ ಅರ್ಥ ಮೂಢನಂಬಿಕೆಯಲ್ಲ.
  —ಸ್ವಾಮಿ ವಿವೇಕಾನಂದ
- ಇಂಗ್ಲಿಷ್ ನಮಗೆ ಬೇಕು, ಆದರೆ ನಮ್ಮ ಭಾಷೆಯ ಬದಲಿಗೆ ಅಲ್ಲ.
  —ಗೋವಿಂದ ಪೈ
- ಇನ್ನೊಬ್ಬರಿಗಾಗಿ ದುಡಿಯಿರಿ. ಆದರೆ ಅನ್ಯರ ದುಡಿಮೆಗೆ ಕೈಚಾಚಬೇಡಿ.
  —ಶರಶ್ಚಂದ್ರ
- ಆಲಿಸಿದ ಆಲಾಪಗಳು ಮಧುರ, ಆಲಿಸದ ಆಲಾಪಗಳು ಇನ್ನೂ ಮಧುರ.
  —ಜಾನ್ ಕೀಟ್ಸ್
- ಅಹಂ ಎಂಬ ಮಿಥ್ಯ ಕಲ್ಪನೆಯ ಹಿಂಬದಿಯಲ್ಲಿರುವ ವಸ್ತುವಿನ ಸಂಪೂರ್ಣ ಶಾಂತತೆಯ ಕೇಂದ್ರದಲ್ಲಿರುವ ಜ್ಞಾನದ, ಶುದ್ಧ ಸತ್ವದ ಅನುಭವವೇ ಆದ್ಯಂತವಾದ ಪಾರಮಾರ್ಥಿಕ ಸತ್ಯ.
  —ರಮಣ ಮಹರ್ಷಿ
- ಪ್ರಕೃತಿಯ ಗತಿಯನ್ನು ರೂಢಿಮಾಡಿಕೊಳ್ಳಿ. ಆಕೆಯ ರಹಸ್ಯವೆಂದರೆ ತಾಳ್ಮೆ, ಸಹನೆ.
  —ಎಮರ್ಸನ್